<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,</u>
<u>ನ್ಯಾಯಾಲಯ,ಹೊಸದುರ್ಗ.</u>

ಸಿ.ಸಿ.ಸಂಖ್ಯೆ: **58/2025** ದಿನಾಂಕ: **-15.06.2026.**

ಪಿ.ಡಬ್ಲ್ಯೂ:**1**

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ೦: ಆರೋಪಿಯ ಪರ ಶ್ರೀ ಎಸ್.ಎಂ ವಕೀಲರಿಂದ</u>

1. ನಾನು ಬೆಂಗಳೂರಿನ ಸೆಂಟ್ ಗೋಬೈನ್ ಮೆಡಿಕಲ್ ಮ್ಯಾನುಪ್ಯಾಕ್ಚರ್ ಕಂಪನಿಯಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಡಿಪ್ಲೋಮಾ ಪದವಿಧರ. ನಾನು ನಾಲ್ಕೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.ಈ ಪ್ರಕರಣದ ಬಗ್ಗೆ ನನ್ನ ತಂದೆ ನನಗೆ ಸಂಪೂರ್ಣವಾಗಿ 2024 ರಲ್ಲಿ ತಿಳಿಸಿದ್ದರು . ನಿಖರ ದಿನಾಂಕ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ತಂದೆ ಈ ಪ್ರಕರಣದ ಬಗ್ಗೆ ತಿಳಿಸಿರುತ್ತಾರೆ ಎಂದು ಬರೆಸಿರುವುದಿಲ್ಲ. ನಮಗೆ ಸೇರಿದ 10 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದ ಪಹಣಿ ಹಾಗೂ ಬೆಳೆ ದೃಡೀಕರಣ ದಾಖಲೆಗಳನ್ನು ಹಾಜರು ಮಾಡಿಲ್ಲ. 10 ಎಕರೆ ಪೈಕಿ 7 ಎಕರೆ ತೋಟ ಇರುತ್ತದೆ. 1 ಎಕರೆಗೆ ಎಷ್ಟು ತೆಂಗಿನ ಗಿಡ ನೆಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ 1 ಗುಂಟೆ ಗೆ ಒಂದು ತೆಂಗಿನ ಗಿಡದಂತೆ ಒಂದು ಎಕರೆಗೆ 40 ತೆಂಗಿನ ಗಿಡ ನೆಡುತ್ತಾರೆ ಎಂದರೆ ಸರಿ . ನಮಗೆ 7 ಎಕರೆಯಲ್ಲಿ 280 ತೆಂಗಿನ ಗಿಡ ಇರುತ್ತದೆ. 5 ಎಕರೆ ಜಮೀನನ್ನು ನನ್ನ ಚಿಕ್ಕಪ್ಪನಿಂದ ಗುತ್ತಿಗೆಗೆ ಪಡೆದಿರುತ್ತೇವೆ. ಈ ಬಗ್ಗೆ ಬರವಣಿಗೆಯಲ್ಲಿ ದಾಖಲೆಗಳು ಇರುವುದಿಲ್ಲ.

2. ಒಂದು ವರ್ಷಕ್ಕೆ ಮೂರು ಸಲ ತೆಂಗಿನ ಫಸಲು ತೆಗೆಯುತ್ತೇವೆ. ಒಂದು ಫಸಲಿಗೆ ಸುಮಾರು 3 ಟ್ರಾಕ್ಟರ್ ಲೋಡು ತೆಂಗಿನ ಫಸಲು ಬರುತ್ತದೆ. ವರ್ಷಕ್ಕೆ ಎರಡುಬಾರಿ ಕೊಬ್ಬರಿ ಸುಲಿಸುತ್ತೇವೆ. ಎಷ್ಟು ಕೊಬ್ಬರಿ ಸುಲಿಸುತ್ತೇವೆ ಎಂದು ನನಗೆ ಗೊತ್ತಿಲ್ಲ. 1000 ಕೊಬ್ಬರಿಗೆ ಅಂದಾಜು 135 ಕೆ.ಜಿ ತೂಕ ಬರುತ್ತದೆ.

26 ಕ್ವಿಂಟಲ್ ಗೆ ಎಷ್ಟು ಕೊಬ್ಬರಿ ಸುಲಿಸಿರುತ್ತೇವೆ ಎಂದು ನನಗೆ ಮಾಹಿತಿ ಇಲ್ಲ. 26 ಕ್ವಿಂಟಲ್ ತೂಕಕ್ಕೆ ಎಷ್ಟು ಸಾವಿರ ಕೊಬ್ಬರಿ ಸುಲಿಯಬೇಕೆಂದು ನನಗೆ ಗೊತ್ತಿಲ್ಲ.

3. ದಿ. 10.11.2024 ರಂದು ನನ್ನ ತಂದೆ ಕೊಬ್ಬರಿ ಸುಲಿಸಿದ ಬಗ್ಗೆ ನನಗೆ ತಿಳಿಸಿರುತ್ತಾರೆ. ಒಂದು ಕ್ವಿಂಟಲ್ ಗೆ 13,000 ರೂ ಬೆಲೆ ಎಂದು ನನ್ನ ತಂದೆ ಹೇಳಿದ್ದರು. ನನ್ನ ತಂದೆ ಯಾವುದರಿಂದ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ತಿಳಿಸಿರುವುದಿಲ್ಲ. ಕೊಬ್ಬರಿ ಅಂಗಡಿಯವರು ಪಟ್ಟಿ ನೀಡುತ್ತಾರೆ. ನನ್ನ ತಂದೆ ಸದರಿ ಪಟ್ಟಿಯನ್ನು ಹಾಜರು ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಚೆಕ್ಕನ್ನು 11.11.2024 ರಂದು ಪಡೆದಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಎಷ್ಟು ಕೊಬ್ಬರಿ ಆಗಿರುತ್ತದೆ ಎಂದು ಪಟ್ಟಿ ಪಡೆದಿರುವುದಿಲ್ಲ. ಸಾಕ್ಷಿ 26 ಕ್ವಿಂಟಲ್ ಆಗಿತ್ತು ಎಂದು ಸ್ವತಃ ನುಡಿಯುತ್ತಾರೆ. ಕೊಬ್ಬರಿಯ ಮೊತ್ತ ನನ್ನ ತಿಳಿಸಿದ್ದರು. ಕೌಟಿನ ಮೊತ್ತ ಎಷ್ಟು ಎಂದು ತಿಳಿಸಿರಲಿಲ್ಲ. ಚೆಕ್ಕನ್ನು ನನ್ನ ಸಮಕ್ಷಮ ಬರೆದುಕೊಟ್ಟಿರುವುದಿಲ್ಲ.

4. ಚೆಕ ನಲ್ಲಿ ಬರೆದಿರುವ ಬರವಣಿಗೆಯ ಇಂಕಿಗೂ ಸಹಿ ಮಾಡಿರುವ ಪೆನ್ ನ ಇಂಕಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರ ಚಕ್ ಮೇಲಿನ ಸಹಿಗೂ ನಿಪಿ-5 ರ ಸ್ವೀಕೃತಿ ಮೇಲಿನ ಸಹಿಗೂ ವ್ಯತ್ಯಾಸ ಇರುತ್ತದೆ ಎಂದು ಸಾಕ್ಷಿಗೆ ತೋರಿಸಿ ಕೇಳಲಾಗಿ ಸಾಕ್ಷಿ ಎರಡೂ ಸಹಿಗಳನ್ನು ಪರಿಶೀಲಿಸಿ ಸಹಿಗಳಲ್ಲಿ ವ್ಯತ್ಯಾಸ ಇರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕನಲ್ಲಿ ಬರವಣಿಗೆಯನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ. ನಿಪಿ-1 ರಲ್ಲಿನ ಬರವಣಿಗೆಯನ್ನು ಆರೋಪಿ ಬರೆಯದಿದ್ದರೂ ನನ್ನ ತಂದೆ ಆರೋಪಿಯೇ ಬರೆದಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಹಣಕಾಸನ ವ್ಯವಹಾರದ ಬಗೆಯಾಗಲೀ ನಿಪಿ-1 ರ ಚೆಕ್ ಬಗ್ಗೆ ಯಾಗಲೀ ನನಗೆ ಯಾವುದೇ ರೀತಿ ಯ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ 26 ಕ್ವಿಂಟಲ್ ಕೊಬ್ಬರಿ ಇಟ್ಟುಕೊಳ್ಳುವಷ್ಟು ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

5. ತೆಂಗಿನ ಕಾಯಿ ಬೆಲೆ ಕಡಿಮೆ ಇದ್ದಾಗ ನಮ್ಮ ಗ್ರಾಮದಲ್ಲಿ ಬೇರೆಯವರಿಂದ ಖರೀದಿ ಮಾಡಿರುತ್ತೇವೆ. ಯಾವಾಗ ಎಷ್ಟೆಷ್ಟು ತೆಂಗಿನ ಕಾಯಿಗಳನ್ನು ಖರೀದಿ ಮಾಡಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿನಲ್ಲಾಗಲೀ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಾಗಲೀ ಈ ವಿಚಾರಗಳನ್ನು ಬರೆಸಿರುವುದಿಲ್ಲ. ಕೊಬ್ಬರಿ ಖರೀದಿಸುವ ಸಮಯದಲ್ಲಿ ಆರೋಪಿ ಬಹಳಷ್ಟು ಬ್ಯುಸಿ ಇರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಹಮಾಲಿಗಳಿಗಾಗಿ ಕೊಡಲು ಇಟ್ಟುಕೊಂಡಿದ್ದ ಚೆಕ್ಕನ್ನು ನನ್ನ ತಂದೆ ಆರೋಪಿಗೆ ತಿಳಿಯದಂತೆ ತೆಗೆದುಕೊಂಡು ಅದನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ .

6. ಆರೋಪಿ ಜಾತ್ರೆ ಸಮಯದಲ್ಲಿ ನಮ್ಮ ಮನೆಯಹತ್ತಿರ ಬರುತ್ತಿದ್ದರು ಹಾಗೂ ಚೆಕ್ಕು ಕೊಡುವ ಒಂದು ವಾರದ ಮೊದಲು ಕೊಬ್ಬರಿ ಖರೀದಿಸಿದ್ದರು. ನಮ್ಮ ಮನೆಯ ಮುಂದೆ ಗಿರೀಶ್ ಎಂಬುವವರಿಂದ ಕೊಬ್ಬರಿ ಖರೀದಿಸಿದ್ದರು. ನಮ್ಮ ಬಳಿ ಕೊಬ್ಬರಿ ಪಡೆದು ಸುಮಾರು 6-7 ದಿನಗಳಲ್ಲಿ ಸದರಿ ಗಿರೀಶ್ ಎಂಬುವವರಿಂದ ಕೊಬ್ಬರಿ ಖರೀದಿಸಿರುತ್ತಾರೆ. ನನ್ನ ತಂದೆ ಆರೋಪಿಗೆ ಕೊಬ್ಬರಿಯನ್ನು ಯಾವಾಗ ಕೊಟ್ಟಿದ್ದರು ಎಂದು ನನಗೆ ದಿನಾಂಕ ಗೊತ್ತಿಲ್ಲ. ಆರೋಪಿ ಚೆಕ್ಕನ್ನು ನನ್ನ ತಂದೆ ಕೊಬ್ಬರಿ ಕೊಟ್ಟ 6-7 ದಿನಗಳ ನಂತರ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಆರೋಪಿಗೆ ಕೊಬ್ಬರಿ ನೀಡಿದ ದಿನಾಂಕವನ್ನು ಬರೆದಿಲ್ಲ . ಆರೋಪಿ ಚೆಕ್ಕನ್ನು ನಮ್ಮ ಮನೆಗೆ ಖುದ್ದಾಗಿ ಬಂದು ಕೊಟ್ಟಿರುತ್ತಾರೆ. ಸಾಕ್ಷಿ ಪುನಃ ಮನೆಯ ಹತ್ತಿರ ಬಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ನನ್ನ ತಂದೆ ದುರ್ಬಳಕೆ ಮಾಡಿಕೊಂಡ ಚೆಕ್ ನ ಬಾಬ್ತು ಆರೋಪಿಯಿಂದ ಅಕ್ರಮಲಾಭ ಹೊಂದುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಹೆಸರು ಮತ್ತು ಕೈ ಬರವಣಿಗೆ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ .

**(ವಕೀಲರು ಮುಂದುವರೆದ** ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು

ನೀಡಲಾಯಿತು**. )**

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.